## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1101 |
| 2 ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್ ಎಸ್.<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| 3 ಉತ್ತರಿಸುವ ದಿನಾಂಕ | : | 25-07-2024 |
| 4 ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಆಸ್ತಿಗಳೆಷ್ಟು; ಈ ಪೈಕಿ ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಆಸ್ತಿಗಳ ಸಂಖ್ಯೆ ಎಷ್ಟು; ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಕಾರಣ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಆಗುತ್ತಿರುವ ನಷ್ಟ ಎಷ್ಟು; ಈ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ತರಲು ಕೈಗೊಂಡಿರುವ ಕ್ರಮಗಳೇನು; (ವಿಧಾನ ಸಭಾ, ಕ್ಷೇತ್ರವಾರು ವಿವರ ನೀಡುವುದು) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅಂದಾಜು 20,83,046 ಗಳಷ್ಟು ಆಸ್ತಿಗಳಿರುತ್ತದೆ.<br><br>ಬಿಬಿಎಂಪಿ ವ್ಯಾಪ್ತಿಯಲ್ಲಿ ಆಸ್ತಿತೆರಿಗೆ ಜಾಲದಿಂದ ಹೊರಗಿರುವ ಆಸ್ತಿಗಳ ಸಮೀಕ್ಷೆಯನ್ನು ಇದುವರೆಗೆ ಕೈಗೊಂಡಿರುವುದಿಲ್ಲ. ಬಿಬಿಎಂಪಿ ವ್ಯಾಪ್ತಿಯಲ್ಲಿ ಸರಿಸುಮಾರು 5 ಲಕ್ಷ ಆಸ್ತಿಗಳು ತೆರಿಗೆ ವ್ಯಾಪ್ತಿಯಿಂದ ಹೊರಗುಳಿದಿರಬಹುದು ಮತ್ತು ಅಂತಹ ಆಸ್ತಿಗಳಿಂದ ವರ್ಷಕ್ಕೆ ಸುಮಾರು ರೂ.500.00 ಕೋಟಿ ತೆರಿಗೆ ಹೆಚ್ಚುವರಿಯಾಗಬಹುದಾಗಿ ಅಂದಾಜಿಸಲಾಗಿದೆ.<br><br>ಮುಂದುವರೆದು, ಅಂತಹ ಎಲ್ಲಾ ಆಸ್ತಿಗಳನ್ನು ಶೀಘ್ರದಲ್ಲೇ ಆಸ್ತಿ ತೆರಿಗೆ ಜಾಲಕ್ಕೆ ತರಲು ಬಿಬಿಎಂಪಿ ವತಿಯಿಂದ ಸಮೀಕ್ಷೆಯನ್ನು ನಡೆಸಲು ಸಿದ್ಧತೆ ನಡೆಸಲಾಗುತ್ತಿದೆ ಹಾಗೂ ಅಂತಹ ಸ್ವತ್ತುಗಳ ಮಾಲೀಕರು/ ನಾಗರಿಕರಿಗೆ ಆನ್‌ಲೈನ್‌ನಲ್ಲಿ ಆಸ್ತಿತೆರಿಗೆಯನ್ನು ಸ್ವಯಂ ಘೋಷಿಸಿ, ಪಾವತಿಸಲು ತಂತ್ರಾಂಶವನ್ನು ಸಿದ್ಧಪಡಿಸಲಾಗುತ್ತಿದೆ.<br><br>(ವಿಧಾನ ಸಭಾ ಕ್ಷೇತ್ರವಾರು ವಿವರಗಳನ್ನು **ಅನುಬಂಧ-01**ರಲ್ಲಿ ಒದಗಿಸಲಾಗಿದೆ.) |
| ಆ | ಕಳೆದ 5 ವರ್ಷದಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಪಾವತಿಸದಿರುವ ಆಸ್ತಿಗಳೆಷ್ಟು; ಆಸ್ತಿ ತೆರಿಗೆ ವಸೂಲಿಗೆ ಕೈಗೊಂಡಿರುವ ಕ್ರಮಗಳೇನು; ತೆರಿಗೆ ಪಾವತಿಸದ ಎಷ್ಟು ಆಸ್ತಿಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹೆಸರಿಗೆ ಅಟ್ಯಾಚ್ ಮಾಡಲಾಗಿದೆ; (ವಿವರ ನೀಡುವುದು) | ಕಳೆದ 5 ವರ್ಷದಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ವಸೂಲಾಗದ ಆಸ್ತಿಗಳು ಅಂದಾಜು 1,23,543 (**ಅನುಬಂಧ-02** ರಲ್ಲಿ ಒದಗಿಸಲಾಗಿದೆ)<br><br>ಪ್ರಸ್ತುತ ಅತೀ ಹೆಚ್ಚು ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಸ್ವತ್ತುಗಳಿಗೆ ನೋಟಿಸ್ ಜಾರಿ ಮಾಡಿ 30 ದಿನದ ಕಾಲಾವಕಾಶದ ನಂತರ ಬಾಕಿ ತೆರಿಗೆ ಪಾವತಿಸದೇ ಇದ್ದಲ್ಲಿ ಸದರಿ ಆಸ್ತಿಯನ್ನು ಬಿಬಿಎಂಪಿ ಕಾಯ್ದೆ ಅನ್ವಯ ಮುಟ್ಟುಗೋಲು ಹಾಕಿಕೊಂಡು, |

| | | |
|---|---|---|
| | | ಮುಟ್ಟುಗೋಲು ಆದೇಶದ (ನಮೂನೆ-13) ಒಂದು ಪ್ರತಿಯನ್ನು ಸಂಬಂಧಪಟ್ಟ ನೋಂದಣಾಧಿಕಾರಿಗಳ ಕಛೇರಿಗೆ ಜಾರಿ ಮಾಡಿ ಸದರಿ ಸ್ವತ್ತಿನ ಆಸ್ತಿ ತೆರಿಗೆಯು ನಗರ ಪಾಲಿಕೆಗೆ ಸಂದಾಯವಾಗದೇ ಬೇ-ಬಾಕಿ ಇರುತ್ತದೆಂದು ಸ್ವತ್ತಿನ ಋಣಭಾರ ರಾಹಿತ್ಯ ಪ್ರಮಾಣ ಪತ್ರದಲ್ಲಿ ದಾಖಲಿಸಲು ಹಾಗೂ ಸದರಿ ಸ್ವತ್ತಿನ ಯಾವುದೇ ವಹಿವಾಟು ಮಾಡತಕ್ಕದಲ್ಲವೆಂದು ಕೋರಿ ಪತ್ರ ಬರೆಯಲು ಕ್ರಮಕೈಗೊಳ್ಳಲಾಗುತ್ತಿದೆ.<br><br>ತೆರಿಗೆ ಪಾವತಿಸದ ಅತೀ ಹೆಚ್ಚು ಕಂದಾಯವನ್ನು (ರೂ.25,000/- ಕ್ಕಿಂತ ಹೆಚ್ಚು ಮೊತ್ತ) ಬಾಕಿ ಉಳಿಸಿಕೊಂಡ ಅಂದಾಜು 26,106 ಸುಸ್ತಿದಾರ ಹಾಗೂ ಬೇ-ಬಾಕಿ ಆಸ್ತಿಗಳಿಗೆ ಮುಟ್ಟುಗೋಲು ಆದೇಶ ಜಾರಿಗೊಳಿಸಲಾಗಿರುತ್ತದೆ. |
| ಇ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಪ್ರತಿಷ್ಠಿತ ಮಾಲ್‌ಗಳು ತೆರಿಗೆ ಬಾಕಿ ಉಳಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ತೆರಿಗೆ ಬಾಕಿ ಉಳಿಸಿಕೊಂಡಿರುವ ಮಾಲ್‌ಗಳು ಯಾವುವು; ವಸೂಲಾಗಬೇಕಿರುವ ಬಾಕಿ ಮೊತ್ತ ಎಷ್ಟು; ತೆರಿಗೆ ಬಾಕಿ ವಸೂಲಿಗೆ ಸರ್ಕಾರ ಕೈಗೊಂಡಿರುವ ಕ್ರಮವೇನು; (ವಿಧಾನ ಸಭಾ, ಕ್ಷೇತ್ರವಾರು ವಿವರ ನೀಡುವುದು) | ಹೌದು.<br><br>ತೆರಿಗೆ ಬಾಕಿ ಉಳಿಸಿಕೊಂಡಿರುವ ಮಾಲ್‌ಗಳು ಮತ್ತು ವಸೂಲಾಗಬೇಕಿರುವ ಬಾಕಿ ಮೊತ್ತದ ವಿವರಗಳನ್ನು **ಅನುಬಂಧ-03**ರಲ್ಲಿ ಒದಗಿಸಲಾಗಿದೆ.<br><br>ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಸ್ವತ್ತುಗಳಿಗೆ ನೋಟಿಸ್ ಜಾರಿ ಮಾಡಿ 30 ದಿನದ ಕಾಲಾವಕಾಶದ ನಂತರ ಬಾಕಿ ತೆರಿಗೆ ಪಾವತಿಸದೇ ಇದ್ದಲ್ಲಿ ಸದರಿ ಆಸ್ತಿಯನ್ನು ಬಿಬಿಎಂಪಿ ಕಾಯ್ದೆ ಅನ್ವಯ ಮುಟ್ಟುಗೋಲು ಹಾಕಿಕೊಳ್ಳುವ ಮೂಲಕ ಆಸ್ತಿ ತೆರಿಗೆ ವಸೂಲಾತಿಗೆ ಕ್ರಮವಹಿಸಲಾಗುತ್ತಿದೆ. ಹಾಗೂ ಸದರಿ ಆಸ್ತಿಗಳ ಋಣಭಾರ ಪತ್ರದಲ್ಲಿ ಆಸ್ತಿತೆರಿಗೆಯ ಬಾಕಿಯ ಬಗ್ಗೆ ನಮುದಿಸಲು ಸಬ್ ರಿಜಿಸ್ಟರ್‌ರವರಿಗೆ ಮುಟ್ಟುಗೋಲು ಆದೇಶದ ಪ್ರತಿಯೊಂದಿಗೆ ಕ್ರಮಕೈಗೊಳ್ಳಲು ತಿಳಿಸಲಾಗುತ್ತಿದೆ ಹಾಗೂ ಅತಿ ಹೆಚ್ಚು ಬೇ-ಬಾಕಿ ಪ್ರಕರಣಗಳಲ್ಲಿ ಬೀಗಮುದ್ರೆ ಹಾಕುವ ಮೂಲಕ ಕ್ರಮ ಕೈಗೊಳ್ಳಲಾಗುತ್ತಿದೆ. |
| ಈ | ತೆರಿಗೆ ವಸೂಲಿ ಸಂಬಂಧ ನ್ಯಾಯಾಲಯದಲ್ಲಿರುವ ಪ್ರಕರಣಗಳ ಸಂಖ್ಯೆ ಎಷ್ಟು; ಕೆಲವು ಪ್ರಕರಣಗಳಲ್ಲಿ ನ್ಯಾಯಾಲಯದಲ್ಲಿ ಸರ್ಕಾರಕ್ಕೆ ಹಿನ್ನಡೆ ಆಗಲು ಕಾರಣಗಳೇನು? | ತೆರಿಗೆ ವಸೂಲಿ ಸಂಬಂಧ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳ ಸಂಖ್ಯೆ:316<br><br>ತೆರಿಗೆ ಪಾವತಿಸುವ ಸಂದರ್ಭದಲ್ಲಿ ಪಾವತಿಸಬೇಕಾದ ತೆರಿಗೆಗಿಂತ ಕಡಿಮೆ ಪಾವತಿಸಿರುವ ಸಂದರ್ಭದಲ್ಲಿ ಗುರುತಿಸಿ ಆಸ್ತಿ ಮಾಲೀಕರು ಸಂದಾಯ |

| | | |
|---|---|---|
| | | ಮಾಡದಿದ್ದ ತೆರಿಗೆ ಮೊತ್ತದೊಂದಿಗೆ ಆ ಮೊತ್ತದ ಎರಡಷ್ಟನ್ನು ದಂಡದ ರೂಪದಲ್ಲಿ ಪಾವತಿಸಲು ಹಾಗೂ ವ್ಯತ್ಯಾಸದ ಮೊತ್ತಕ್ಕೆ ಶೇ. 9ರಷ್ಟು ಬಡ್ಡಿಯೊಂದಿಗೆ ಪಾವತಿಸಲು ಡಿಮ್ಯಾಂಡ್ ನೋಟಿಸ್‌ಗಳನ್ನು ಜಾರಿಗೊಳಿಸಲಾಗಿರುತ್ತದೆ. ತೆರಿಗೆ ಬಾಕಿ ಎಷ್ಟೇ ವರ್ಷ ಹಳೆಯದಾದರೂ ಅಷ್ಟೂ ವರ್ಷಗಳಿಗೆ ದುಪ್ಪಟ್ಟು ದಂಡ ಮತ್ತು ಬಡ್ಡಿಯನ್ನು ಪಾವತಿಸಲು ಸೂಚಿಸಲಾಗುತ್ತದೆ. ಇಂತಹ ಡಿಮ್ಯಾಂಡ್ ನೋಟಿಸ್‌ಗಳನ್ನು ಪ್ರಶ್ನಿಸಿ ಆಸ್ತಿ ಮಾಲೀಕರು ಬಹುಪಾಲು ಪ್ರಕರಣಗಳನ್ನು ದಾಖಲಿಸಿರುತ್ತಾರೆ. ಇಂತಹ ಕೆಲವೊಂದು ಪ್ರಕರಣಗಳು ಪಾಲಿಕೆಗೆ ವ್ಯತಿರಿಕ್ತವಾಗಿ ಆದೇಶವಾದಲ್ಲಿ ಅಂತಹ ಆದೇಶಗಳ ವಿರುದ್ಧ ಮೇಲ್ಮನವಿ ಸಲ್ಲಿಸಲಾಗುತ್ತಿರುತ್ತದೆ.<br><br>ದಂಡ ಮತ್ತು ಬಡ್ತಿ ಪ್ರಮಾಣವನ್ನು ಕಡಿಮೆಗೊಳಿಸಲು ಹಾಗೂ ವಸತಿ ಮತ್ತು ಮಿಶ್ರಬಳಕೆಯ ಆಸ್ತಿಗಳ ತೆರಿಗೆ ಬಾಕಿಯನ್ನು ವಸೂಲಿ ಮಾಡುವಲ್ಲಿ ಪರಿಗಣಿಸಬಹುದಾದ ಹಿಂದಿನ ವರ್ಷಗಳ ಸಂಖ್ಯೆಗೆ ಮಿತಿ ವಿಧಿಸಲು ಒಂದು ಬಾರಿ ಪರಿಹಾರ ಯೋಜನೆಯನ್ನು ಜಾರಿಗೊಳಿಸಲಾಗಿರುತ್ತದೆ.<br><br>ಈ ಹಿನ್ನೆಲೆಯಲ್ಲಿ ಆಸ್ತಿ ತೆರಿಗೆ ವಸೂಲಾತಿ ಸಂಬಂಧ ದಾಖಲಾದ ಪ್ರಕರಣಗಳಲ್ಲಿ ಬಿಬಿಎಂಪಿ/ ಸರ್ಕಾರಕ್ಕೆ ಯಾವುದೇ ಹಿನ್ನಡೆಯಾಗಿರುವುದಿಲ್ಲ. |

**ನಅಇ 132 ಬಿಬಿಎಸ್ 2024(ಇ)**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ.

## ಅನುಬಂಧ-01

### ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಆಸ್ತಿಗಳ ವಿವರ-ವಿಧಾನ ಸಭಾ ಕ್ಷೇತ್ರವಾರು

| ಕ್ರಮ ಸಂಖ್ಯೆ | ವಲಯ | ವಿಧಾನ ಸಭಾ ಕ್ಷೇತ್ರದ ಹೆಸರು | ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಆಸ್ತಿಗಳ ಸಂಖ್ಯೆ |
|---|---|---|---|
| 1 | ದಕ್ಷಿಣ | ಬಿ.ಟಿ.ಎಂ ಲೇಔಟ್ | 49,712 |
| 2 | | ಪದ್ಮನಾಭನಗರ | 49,549 |
| 3 | | ಚಿಕ್ಕಪೇಟೆ | 41,700 |
| 4 | | ಜಯನಗರ | 39,046 |
| 5 | | ಬಸವನಗುಡಿ | 37,375 |
| 6 | | ವಿಜಯನಗರ | 45,124 |
| 7 | ಬೊಮ್ಮನಹಳ್ಳಿ | ಬೊಮ್ಮನಹಳ್ಳಿ | 1,15,835 |
| 8 | | ಆನೇಕಲ್ | 8,736 |
| 9 | | ಬೆಂಗಳೂರು ದಕ್ಷಿಣ | 1,86,218 |
| 10 | ರಾಜರಾಜೇಶ್ವರಿನಗರ | ರಾಜರಾಜೇಶ್ವರಿನಗರ | 1,23,830 |
| 11 | | ಯಶವಂತಪುರ | 1,39,386 |
| 12 | ಮಹದೇವಪುರ | ಕೆ.ಆರ್.ಪುರ | 1,54,746 |
| 13 | | ಮಹದೇವಪುರ | 2,45,937 |
| 14 | ದಾಸರಹಳ್ಳಿ | ದಾಸರಹಳ್ಳಿ | 82,911 |
| 15 | ಪೂರ್ವ | ಹೆಬ್ಬಾಳ | 48,413 |
| 16 | | ಪುಲಿಕೇಶಿನಗರ | 36,840 |
| 17 | | ಸರ್ವಜ್ಞನಗರ | 85,570 |
| 18 | | ಸಿ.ವಿ.ರಾಮನ್‌ನಗರ | 60,433 |
| 19 | | ಶಾಂತಿನಗರ | 44,843 |
| 20 | | ಶಿವಾಜಿನಗರ | 38,373 |
| 21 | ಪಶ್ಚಿಮ | ರಾಜಾಜಿನಗರ | 27,769 |
| 22 | | ಮಹಾಲಕ್ಷ್ಮೀಪುರ | 43,391 |
| 23 | | ಗೋವಿಂದ ರಾಜನಗರ | 44,774 |
| 24 | | ಗಾಂಧಿನಗರ | 49,720 |
| 25 | | ಚಾಮರಾಜಪೇಟೆ | 25,059 |
| 26 | | ಮಲ್ಲೇಶ್ವರಂ | 37,890 |
| 27 | ಯಲಹಂಕ | ಯಲಹಂಕ | 60,752 |
| 28 | | ಬ್ಯಾಟರಾಯನಪುರ | 1,59,114 |
| ಒಟ್ಟು | | | 20,83,046 |

ವಿಶೇಷ ಆಯುಕ್ತರು (ಕಂದಾಯ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

(42)

ಅನುಬಂಧ-2

| ಕ್ರಮ ಸಂಖ್ಯೆ | ವಲಯ | ಕಳೆದ 5 ವರ್ಷದಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ವಸೂಲಾಗದ ಆಸ್ತಿಗಳೆಷ್ಟು |
|---|---|---|
| 1 | ದಕ್ಷಿಣ | 7757 |
| 2 | ಆರ್ ಆರ್ ನಗರ | 13091 |
| 3 | ಬೊಮ್ಮನಹಳ್ಳಿ | 14229 |
| 4 | ಮಹಾದೇವಪುರ | 41966 |
| 5 | ಯಲಹಂಕ | 7245 |
| 6 | ಪಶ್ಚಿಮ | 21909 |
| 7 | ಪೂರ್ವ | 9888 |
| 8 | ದಾಸರಹಳ್ಳಿ | 7458 |
| | | **123543** |

22/7/24

Special Commissioner (Revenue)
Bruhath Bangalore Mahanagar Palike

# ಅನುಬಂಧ-03

## ತೆರಿಗೆ ಬಾಕಿ ಉಳಿಸಿಕೊಂಡಿರುವ ಮಾಲ್‌ಗಳ ವಲಯವಾರು ವಿವರ ಈ ಕೆಳಕಂಡಂತಿದೆ

| ಕ್ರಮ ಸಂಖ್ಯೆ | ವಲಯ | ವಿಧಾನ ಸಭಾ ಕ್ಷೇತ್ರದ ಹೆಸರು | ತೆರಿಗೆ ಬಾಕಿ ಉಳಿಸಿಕೊಂಡಿರುವ ಮಾಲ್ ಹೆಸರು ಮತ್ತು ವಿಳಾಸ | ವಸೂಲಾಗಬೇಕಿರುವ ಒಟ್ಟು ತೆರಿಗೆ ಬಾಕಿ ಮೊತ್ತ | ಷರಾ |
|---|---|---|---|---|---|
| 1 | ಪಶ್ಚಿಮ | ಗಾಂಧಿನಗರ | ಮಂತ್ರಿಮಾಲ್ ಸಂಪಿಗೆ ರಸ್ತೆ | 315447333 | ಬಾಕಿ ವಸೂಲಿಗೆ ಸದರಿ ಕಟ್ಟಡವನ್ನು ಬೀಗಮುದ್ರೆ ಮಾಡಿದ್ದುಸದರಿ ಸಂಸ್ಥೆಯವರು ನ್ಯಾಯಾಲಯದಲ್ಲಿ ದಾವೇ ಹೂಡಿಮೇಲ್ಮನವಿ ಸಲ್ಲಿಸಲಾಗಿರುತ್ತದೆ. ಮಾನ್ಯ ನ್ಯಾಯಾಲಯವು ಮಂತ್ರಿಮಾಲ್ ಮಾಲೀಕರಿಗೆ ಜೂನ್–01ಕ್ಕೆ 3.50 ಕೋಟಿಕಂದಾಯ ಪಾವತಿ ಮಾಡಲುಮತ್ತು ದಿನಾಂಕ: 31–07–2024ಕ್ಕೆ 20.00 ಕೋಟಿ ತೆರಿಗೆಯನ್ನು ಪಾವತಿಸಲು ಮಧ್ಯಂತರ ಆದೇಶ ನೀಡಿರುತ್ತದೆ. |
| 2 | ಬೊಮ್ಮನಹಳ್ಳಿ | ಬೊಮ್ಮನಹಳ್ಳಿ | ಮಿನಾಕ್ಷಿ ಮಾಲ್ | 29145265 | ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೊಕದ್ದಮೆ ಸಂಖ್ಯೆ:12439/2024 ರಲ್ಲಿ ವಿಚಾರಣೆ ಹಂತದಲ್ಲಿರುತ್ತದೆ |
| 3 | | ಬೊಮ್ಮನಹಳ್ಳಿ | ಸೆಂಟ್ರೋ ಮಾಲ್ | 12275485 | ನೋಟಿಸ್ ಜಾರಿ ಮಾಡಲಾಗಿದೆ |
| 4 | ದಕ್ಷಿಣ | ವಿಜಯನಗರ | ಜಿ ಟಿ ವರ್ಲ್ಡ್ ಮಾಲ್ | 34756267 | ಸದರಿ ಸ್ವತ್ತಿನ ಮಾಲೀಕರು ಕಂದಾಯ ಪಾವತಿಸುವ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಫಾಕ–13689/2021 (ಈಐಖ ಓ.ಅ.11072/2021) ದಾವೆ ಹೂಡಿರುತ್ತಾರೆ. |
| 5 | | ಜಯನಗರ | ಗೋಪಾಲನ್ ಮಾಲ್ | 27123483 | 2024-25 Tax Due and TSS Revision Amount Should be Paid As per the OTS From 2010-11 Rs.2,71,23,483/- |
| 6 | | ಜಯನಗರ | ಸೆಂಟ್ರಲ್ ಮಾಲ್ | 26250448 | 2024-25 Tax Due and TSS Revision Amount Should be Paid As per the OTS From 2010-11 Rs.2,62,50,448/- |
| 7 | | ಬಿ ಟಿ ಎಂ | ಲೈಫ್ ಸ್ಟೈಲ್ | 77841574 | 2024-25 Tax Due and TSS Revision Amount Should be Paid As per the OTS From 2008-09 Rs.7,78,41,574/- |
| 8 | ಮಹದೇವಪುರ | ಮಹದೇವಪುರ | ಸೆಂಟ್ರಲ್ ಮಾಲ್ | 24685970 | ಒಟಿಎಸ್ ಪ್ರಕಾರ ಡಿಮ್ಯಾಂಡ್ ನೋಟಿಸ್ ಜಾರಿ ಮಾಡಲಾಗಿರುತ್ತದೆ ಮತ್ತು ಬೀಗಮುದ್ರೆ ಹಾಕಲಾಗಿದೆ. |
| 9 | | ಮಹದೇವಪುರ | ವರ್ಜಿನಿಯಾ ಮಾಲ್ | 3095570 | 1 ವರ್ಷದ ತೆರಿಗೆ ಬಾಕಿ ಇರುತ್ತದೆ |
| 10 | | ಮಹದೇವಪುರ | ಸುಗಮ ವಾಣಿಜ್ಯ ಹೋಲ್ಡಿಂಗ್ಸ್ (ವಿ ಆರ್ ಮಾಲ್) | 37234472 | 2 ವರ್ಷದ ತೆರಿಗೆ ಬಾಕಿ ಇರುತ್ತದೆ |

22/7/24

Special Commissioner (Revenue)
...th Bangalore Mahanagar Palike

| | | | | | |
|---|---|---|---|---|---|
| 11 | ದಾಸರಹಳ್ಳಿ | ದಾಸರಹಳ್ಳಿ | ರಾಕ್ ಲೈನ್ ಮಾಲ್ | 21058509 | ಈ ಸ್ವತ್ತಿನ ಆಸ್ತಿ ತೆರಿಗೆ ಒಟ್ಟು ಮೊತ್ತ ರೂ. 6,62,76,686/– ಗಳಾಗಿದ್ದು, ಈ ಪೈಕಿ ಮಾನ್ಯ ನ್ಯಾಯಾಲಯದ ಆದೇಶದಂತೆ ರೂ. 2,41,59,069/– ಗಳ ಮೊತ್ತವನ್ನು ಪಾವತಸಿರುತ್ತಾರೆ. ಉಳಿಕೆ ಮೊತ್ತ ರೂ. 42117617/– ಗಳನ್ನು ಪಾವತಿಸಬೇಕಾಗಿದ್ದು, ಈ ಪೈಕಿ ಶೇಕಡ 50% ಮೊತ್ತ ರೂ. 21058509/– ಗಳನ್ನು ಪಾವತಿಸಿ ಕಂದಾಯ ಪರಿಷ್ಕರಣೆಯ ಬಗ್ಗೆ ಮೇಲ್ಮನವಿ ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿ ಬಗ್ಗೆ ಮಾನ್ಯ ಅಪರ ಆಯುಕ್ತರು (ದಾಸರಹಳ್ಳಿ) ರವರು ವಿಚಾರಣೆ ನಡೆಸಲಾಗಿ ಕಂದಾಯ ಪರಿಷ್ಕರಣೆ ಮಾಡಿರುವ ಸಮಂಜಸವಾಗಿದ್ದು, ಉಳಿಕೆ ಮೊತ್ತ ರೂ. 21058509/– ಗಳನ್ನು ಪಾವತಿಸಲು ಆದೇಶ ನೀಡಿರುತ್ತಾರೆ. |
| 12 | ಪೂರ್ವ | ಶಾಂತಿನಗರ | HOLDER (M/S MAVERICK HOLDINGS AND INVESTMENTS PVT LTD NO: 17/1, MAGRATH ROAD, BANGALORE | 0 | ಪೂರ್ವ ವಲಯದ ವ್ಯಾಪ್ತಿಯಲ್ಲಿರುವ ಎಲ್ಲಾ ಮಾಲ್ ಗಳಿಂದ ಆಸ್ತಿ ತೆರಿಗೆ ಸಂಗ್ರಹವಾಗಿರುತ್ತದೆ ಆದರೆ HOLDER (M/S MAVERICK HOLDINGS AND INVESTMENTS PVT LTD NO: 17/1, MAGRATH ROAD, BANGALORE ಮಾಲ್‌ಗೆ ಆಸ್ತಿ ತೆರಿಗೆಯನ್ನು 2023–24ನೇ ಸಾಲಿನ ಆಸ್ತಿ ತೆರಿಗೆ ರೂ.4520071/– ಗಳನ್ನು ಪಾವತಿಸಿರುತ್ತಾರೆ. (2008–09ನೇ ಸಾಲಿನಿಂದ 2022–23ನೇ ಸಾಲಿನವರೆಗೆ) ಪರಿಷ್ಕೃತ ಆಸ್ತಿ ತೆರಿಗೆಗೆ ಸಂಬಂಧಿಸಿದಂತೆ ಮಾನ್ಯ ಘನ ಉಚ್ಚ ನ್ಯಾಯಾಲಯದಲ್ಲಿ ಡಬ್ಲ್ಯೂ.ಪಿ.ಸಂಖ್ಯೆ:29334/2023 (ಎಲ್‌ಬಿ–ಬಿಎಂಪಿ)ದಾವೆ ಹೂಡಿರುತ್ತಾರೆ |
| 13 | ರಾಜರಾಜೇಶ್ವರಿನಗರ | ರಾಜರಾಜೇಶ್ವರಿನಗರ ವಲಯ ವ್ಯಾಪ್ತಿಯಲ್ಲಿ 3 ಮಾಲ್‌ಗಳಿದ್ದು, ಯಾವುದೇ ಆಸ್ತಿ ತೆರಿಗೆ ಬಾಕಿ ಇರುವುದಿಲ್ಲ. | | | |
| 14 | ಯಲಹಂಕ | ಯಾವುದೇ ಮಾಲ್‌ಗಳು ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವುದಿಲ್ಲ | | | |
| | | | **Total** | **654132553** | |

22/7/24

Special Commissioner (Revenue)
Bruhath Bangalore Mahanagar Palike